‘ಎಲ್ಲೋಯ್ತು?’ ತಲೆಯೊಳಗೆ ನೂರಾರು ಆಲೋಚನೆ. ‘ಮನೆಬಿಟ್ಟು ಹೋಗುವಂಥದ್ದಲ್ಲ. ಮಗ ಯಾವತ್ತೂ ಇಂಥ ತಪ್ಪು ಮಾಡಿಲ್ಲ. ಅಂಥಾ ಬಿರುಗಾಳಿಗೆ ಸಿಕ್ಕಿ ಯಾರ್ದಾರ ಮನೇಲುಳೀತ? ಏನಾರ ಆಸೆ ಹುಟ್ಸಿ ಈ ಕೊರಮರ ಹುಡುಗರು, ಈ ನಾಯಕ್ರುಡುಗ್ರು ಕಾಡಂದಿ ಬೇಟೆಗೇನಾರ…’ ಮನಸ್ಸು ಬಹಳ ದೂರಕ್ಕೆ ಚಲಿಸಿ ಥಟ್ಟನೆ ಏನಾದರೂ ಮಾಡಲು ಬೆಳಗಾಗುವುದನ್ನೇ ಎದುರು ನೋಡುತ್ತಿದ್ದಳು.

ಗಾಡಿಗಳಿಂದ ಎಲ್ಲ ಇಳಿದು ಅವರವರ ಮನೆಗಳಿಗೆ ಹೋಗುತ್ತಿದ್ದರು. ಬಿಲ್ಲೆ ಹಾಕಿ ಮಲಗಿದ್ದ ನಾಯಿಗಳು ಗೊಳ್ ಎಂದವು. ‘ಹಚಾ ಹಚಾ ಇವ್ರ ನಾಲ್ಗೆ ಬಿದ್ದೋಗ’ ಎಂದು ನಾಯಿಗಳಿಗೆ ಬೈದುಕೊಂಡು ಹೋಗುತ್ತಿದ್ದ ಶಂಕರ. ಅದೇ ದಾರಿಯಲ್ಲಿ ಬೀಡಿ ಹಚ್ಚಿ ಹೊಗೆ ಬಿಡುತ್ತಾ ಬಂದ ಆಚಾರ್ರು ‘ಏನ್ ಶಂಕ್ರ ಮದುವೆ ಚೆನ್ನಾಗಾಯ್ತಾ’ ಎಂದು ಕೇಳುತ್ತಾ, ‘ಅಲ್ಗೇನಾರ ಸಿದ್ದಣ್ಣನುಡ್ಗ ತ್ಯಾಗ ಬಂದಿದ್ನ?’ ಅಂತನೂ ಕೇಳಿದ. ‘ಇಲ್ಲ’ ಅಂದ ಶಂಕ್ರ ‘ನನಗೊಂದು ಕಡ್ಡಿ ಕೊಡು’ ಎನ್ನುತ್ತ ಬೀಡಿ ಹಚ್ಚಿ ಒಂದ್ ದಂ ಎಳ್ದು, ಹೊಗೆ ಆಚೆಗ್ ಬಿಟ್ಟು ಅದೇನೋ ನೆನಪಾದವನಂತೆ ‘ಇಲ್ಲಾ ನಾವು ಹೋಗ್ವಾಗ ಆ ಹುಡ್ಗ ಇಲ್ಲೇ ಇತ್ತು. ನಮ್ಮ ಜೊತೆಗೆ ಬರ್ಲಿಲ್ಲ’ ಅಂತ ಅಂದನು. ಆ ಮಾತಿಗೆ ಆಚಾರ್ರು ‘ಎಲ್ಲೋತ್ತೋ ಕಾಣೆ. ಅವಕ್ಕ ಎಲ್ಲಾಕಡೆ ಹುಡುಕಂಡು ಸುತ್ತೈತೆ’ ಅನ್ನುತ್ತಿದ್ದಂತೆ ತಟ್ಟನೆ ಶಂಕ್ರನಿಗೆ ನೆನಪಾಗಿ, ‘ನಮ್ಮ ಗವಿರಂಗಣ್ಣ ಅದೆಲ್ಲೋ ಸ್ಕೂಲಿಗೆ ಸೇರುಸ್ತಿನಿ ಅಂತಿದ್ರಲ್ಲ, ಅವರ್ನೇ ಕೇಳ್ಬೇಕಿತ್ತು’ ಅಂದನು. ಆ ಮಾತಿಗೆ ಆಚಾರ್ರು, ‘ಅದಕ್ಕಿನ್ನೂ ಟೈಮೈತೆ, ಅದು ತುಮ್ಕೂರಲ್ಲಲ್ವ? ಇನ್ನೂ ನಾಲ್ಕೈದು ದಿನ ಅಂದಿದ್ರು. ಸಂಜೆಯಿಂದ ಎಲ್ಲೂ ಕಾಣ್ತೆಲ್ಲ, ಇಂಥಾ ಗಾಳೀಲಿ ಎಲ್ಲೋಯ್ತೋ?’. ಆ ಮಾತಿಗೆ ಶಂಕ್ರನು, ‘ಗಾಳಿ ಅಲ್ವಾ, ಎಲ್ಲೋ ಯಾರಮನೇಲೋ ಇರುತ್ತೆ, ಬರುತ್ತೆ’ ಎನ್ನುತ್ತಾ ಮಾತನಾಡಿಕೊಂಡು ಅತ್ತೊಬ್ಬ ಇತ್ತೊಬ್ಬರಾದರು.

* * *

ಸ್ನೇಹ ಸಂಬಂಧ ಆಟವಾಡಿ ಹೋಗಲು ಕಾಡಿನಿಂದ ನಾಡಿಗೆ ಬಂದ ಮಂಗಾಟೆ, ಮಿಂಚುಳ್ಳಿ ಕಾಲಕ್ಕೆ ರೆಕ್ಕೆ ಬದಲಿಸಿ ಹೋದವು. ಅತ್ತಿಂದ ಹಾರಿಬಂದ ಬೆಳ್ಳಕ್ಕಿ ಗೋಣಿ ಮರ ಏರಿತು. ಗೋರ್ಕಲ್ಲು ಗೋಣಿಮರ ಕಾಡಿನಿಂದ ಬಂದ ಬೆಳ್ಳಕ್ಕಿ ಜೊತೆ ರಾತ್ರಿ ಸೋಜಿಗಗಳನ್ನು ಉಸಿರಾಡುತ್ತಿದ್ದವು. ಜನ ಒಬ್ಬರಿಗೊಬ್ಬರು ಸೇರುತ್ತಿದ್ದರು. ಚಂದ್ರನ ಸಾವು ಬೆಳ್ಳಕ್ಕಿ, ಗೋಣಿಮರ ಗೋರ್ಕಲ್ಲ ಎದೆಯೊಳಗೆ ಮುಳ್ಳಾಡಿಸಿದಂತಾಗಿತ್ತು. ಜನ ಸೇರಿದಂತೆಲ್ಲ ಕಾಗೆಗಳ ಗುಂಪೊಂದು ಸದ್ದಗದ್ದಲ ಏಳಿಸಿತ್ತು. ಬೆಳ್ಳಕ್ಕಿ ಹಾರಲಾರದ ತನ್ನ ಭಾರದ ರೆಕ್ಕೆ ಬಡಿದು ಕಾಡಿನತ್ತ ಹಾರಿತು. ಗೋರ್ಕಲ್ಲು ಗೋಣಿ ಮರ ಬದುಕಿನ ಕೃತಕತೆಯ ಬಗ್ಗೆ ಯೋಚಿಸುತ್ತಾ ಬೇರಿನ ಆಳಕ್ಕಿಳಿದವು. ಹಸಿರು ಬೆಟ್ಟ ಗುಡ್ಡ ಹೊಲ ಗದ್ದೆ ಬಯಲು ಹಳ್ಳ ಕೆರೆ ಕಟ್ಟೆ ಮುಳ್ಳು ಬೇಲಿ ದಿಕ್ಕೆಟ್ಟಂತಿದ್ದವು. ಊರು, ಮಲ್ಲನ ಮನೆ ಅನಾವರಣಗೊಳ್ಳುತ್ತಾ ಹೆಣಕ್ಕೆ ಸ್ನಾನ ಮಾಡಿಸಲು ಹೆಂಗಸರಿಗೆ ಹೇಳುತ್ತಿದ್ದರು. ಮೇಗಳ ಮನೆ ಬಿಂದಿಗೆ, ಕೆಳಗಲ ಮನೆ ಬಿಂದಿಗೆ, ಬುಡ್ಡಯ್ಯನ ಪ್ಲಾಸ್ಟಿಕ್ ಬಿಂದಿಗೆ ಅಲ್ಲಿ ನೀರು ತುಂಬಿಕೊಂಡು ಎಲ್ಲ ಒಟ್ಟಾಗಿ ಮಾತಿಗಿಳಿದಿದ್ದವು. ಎಷ್ಟು ಮಾತಾಡಿದರೂ ಮಾತಾಡದ ಆ ಪ್ಲಾಸ್ಟಿಕ್ ಬಿಂದಿಗೆ ಕುರಿತು ಹಿಂದಿನ ನೆನಪು ಮಾಡಿಕೊಂಡು ಪಕ್ಕದಲ್ಲಿದ್ದ ಮೇಗಲ ಮನೆ ಬಿಂದಿಗೆ ಕೆಳಗಲ ಮನೆ ಬಿಂದಿಗೆಗೆ ಹೇಳಿತು. ಅದೇ ಇವ್ನು ಚಂದ್ರನ ಸೊಂಟದ ಮೇಲೆ ಕುಳಿತು ಸಾಗುವ ಕನಸು ಕಂಡಿದ್ಲಲ್ಲ, ಅದೇನಾದರೂ ನೆನಪಾಗಿ ಮೌನಕ್ಕೆ ಹೋದಳೋ ಏನೋ ಎಂದಿತು.

ಅಷ್ಟೊತ್ತು ತನ್ನ ದುಃಖವನ್ನು ಅದುಮಿಟ್ಟು ಕೊಂಡಿದ್ದ ಬುಡ್ಡಯ್ಯನ ಮನೆ ಬಿಂದಿಗೆ ಒಂದೆರಡು ಹನಿ ತುಳುಕಿಸಿ ಮಾತಾಡಿತು. ನಮ್ಮಂತವರಿಗೆ ಒಂದು ಕಡೆ ನೆಲೆಯಾಗಿ ನಿಲ್ಲಲು ಅವಕಾಶ ಇಲ್ಲ. ಯಾರೋ ಕೊಳ್ಳುತ್ತಾರೆ, ಸ್ವಲ್ಪದಿನ ಅಲ್ಲಿ ಬಾಳಬೇಕಾಗುತ್ತದೆ. ಅಕಸ್ಮಾತ್ ಆಯ ತಪ್ಪಿ ಎತ್ತಾಕಿದರೆ ಅಲ್ಲೇ ನಮ್ಮ ಸಾವು. ಯಾರೋ ಸಾಬರಿಗೆ ತೂಕಕ್ಹಾಕಿ ಕೈ ಚೆಲ್ತಾರೆ. ಇನ್ನೆಲ್ಲೋ ಜನ್ಮ ತಾಳಿ ಮತ್ತ್ಯಾರದೋ ಮನೆಯಲ್ಲಿ ಬಾಳ ಬೇಕಾಗುತ್ತದೆ. ನಾನು ಹೀಗೆ ಹತ್ತಾರು ಕಡೆ ಬಾಳಿದೆ. ನನಗೆ ಈ ಚಂದ್ರನ ಜತೆಗೆ ಬಾಳಿದ ನೆನಪು ಮಾತ್ರ ಎದೆಯಲ್ಲಿ ಮಾಸಿಲ್ಲ. ಸದಾ ಸಂಪಿಗೆಗೆ ನೀರು ಹಾಕುತ್ತಿದ್ದಳು. ಆಗ ಸಂಪಿಗೆ, ಚಂದ್ರ ಇಬ್ಬರೂ ಒಟ್ಟಿಗೇ ಬೆಳೆಯುತ್ತಿದ್ದರು. ಚಂದ್ರ ಸ್ನಾನಕ್ಕೋದಾಗ ಆ ಊರಿನ ಪಕ್ಕದ ಮನೆ ಹುಡುಗ ನೀರು ತರಲು ನನ್ನನ್ನು ಕರೆದುಕೊಂಡು ಹೋದನು. ಗಂಗೆ ಹೊತ್ತು ತರುವಾಗ ಹಸ ಕರು ಕಟ್ಟಲು ನೆಟ್ಟಿದ್ದ ಗೂಟ ಆ ಹುಡುಗನ ಕಾಲಿಗೆ ತೊಡರಿ ಬಿದ್ದ. ಆಗ ನಾನು ಪ್ರಾಣ ಕಳೆದುಕೊಂಡೆ. ಅಲ್ಲಿಂದ ಹೊಸ ರೂಪ ಪಡೆದು ಆ ಕೈ ಈ ಕೈ ದಾಟಿ ಈ ಊರಿಗೆ ಬಂದೆ. ನಾನು ಎಲ್ಲಿರುತ್ತೇನೋ, ಎಲ್ಲಿಗೆ ಹೋಗುತ್ತೇನೋ ಅಲ್ಲೆಲ್ಲಾ ಇಷ್ಟೂ ವರ್ಷ ಹೊಂದಾಣಿಕೆ ಮಾಡಿಕೊಂಡು ಬದುಕುವ ಸ್ವಭಾವ ಬೆಳೆಸಿಕೊಂಡು ಬಂದಿದ್ದೇನೆ. ಆದರೆ ಅದ್ಯಾಕೋ ಇಲ್ಲಿಗೆ ಬಂದಾಗ ಒಂಥರಾ ತಳಮಳ ಇದ್ದೇ ಇತ್ತು. ಸ್ವಲ್ಪ ದಿನ ಈ ಊರಿನಲ್ಲಿ ಬಾಳಿದ ಮೇಲೆ ನನಗದು ತಿಳಿಯಿತು. ಈ ಊರಲ್ಲಿ ಏನೋ ಒಂಥರಾ ವೈಬ್ರೇಶನ್, ಏನೋ ವಿಸ್ಮಯ. ನನ್ನ ಸುತ್ತ ಸೋಕಿದಂತಾಗುವ ಕಾರಣದಿಂದಾಗಿ ನನಗೆ ಚಂದ್ರ ಇರುವುದು ಗೊತ್ತಾಯಿತು. ನಾನು ಚಂದ್ರನ ಸೇರುವ ನನ್ನ ಚಿಗುರಿದ ಆಸೆಯನ್ನ ನಿಮ್ಮೊಂದಿಗೆ ಹೇಳಿಕೊಂಡಿದ್ದೆ. ಆ ಆಸೆಗೆ ಇವತ್ತು ಪೆಟ್ಟು ಬಿದ್ದುಹೋಯಿತು ಎಂದು ಹೇಳುವಾಗ ಒಂದೆರಡು ಹನಿ ತುಳುಕಿದವು. ಅಲ್ಲಿದ್ದ ಬಿಂದಿಗೆಗಳೂ ಸಹ ಕಣ್ಣೀರು ಒರೆಸಿಕೊಳ್ಳುತ್ತಾ ಮಾತಿಗೆ ಮುಂದಾದವು. ಮೇಗಳ ಮನೆ ಬಿಂದಿಗೆ ಮಧ್ಯ ಬಾಯಾಕಿ ಅದ್ಕೇ ಕಣವ್ವಾ ನಿನ್ನ ಮಾತಿಗೆ ಗೌರವ ಕೊಡ್ತಾ ಇದ್ದೆವು. ಒಂದೇ ವಿಷಯದ ಬಗ್ಗೆ ಒಬ್ಬರು ಹೆಚ್ಚು ಮಾತನಾಡುತ್ತಿದ್ದಾರೆಂದರೆ ಕೇಳಿಸಿಕೊಳ್ಳುವುದು ನಮ್ಮ ಧರ್ಮ. ಅಲ್ಲಿನ ನೆಲ, ಅಲ್ಲಿನ ಜಲ, ಅಲ್ಲಿನ ಧರ್ಮ, ಸಂಸ್ಕೃತಿ, ಬದುಕು ಹೀಗೆ ಅವರ ಮಾತಿನಲ್ಲಿ ಎಲ್ಲವೂ ಮಿಳಿತಗೊಂಡಿರಬಹುದು.

ಈಗ ಪ್ಲಾಸ್ಟಿಕ್ ಬಿಂದಿಗೆ ತಾನು ಮಾತನಾಡುವ ಅವಕಾಶ ಮಾಡಿಕೊಂಡಿತು. ಕಣ್ಣಲ್ಲಿ ನೀರು ತುಂಬಿಕೊಂಡು ಮಾತಾಡಿತು. ಚಂದ್ರ ಪ್ರಶ್ನೆ ಮಾಡುತ್ತಾ ಯಾವಾಗಲೂ ಸಂಪಿಗೆ ಜೊತೆ ಇರುತ್ತಿತ್ತು. ಚಂದ್ರ ಊರಿನಿಂದ ಬರುವಾಗ ಜೊತೆಗೆ ಆ ಸಂಪಿಗೆಯನ್ನೂ ಕರೆತಂದಿತ್ತು, ಇವತ್ತು ಅವಳೊಟ್ಟಿಗೆ ಸಂಪಿಗೆಯನ್ನು ಕೂಡ ಕರೆದೊಯ್ದಿತು ಎಂದು ನಿಟ್ಟುಸಿರು ಬಿಟ್ಟಿತು. ಚಂದ್ರದ ಸೊಂಟದ ಮೇಲೆ ಹೋಗುವ ಆಸೆ ಇಂದಿಗೆ ಕೊನೆಯಾಯಿತು. ಇಂಥಾ ಸ್ಥಿತಿಯಲ್ಲಿ ನಾನು ಗಂಗೆ ಹೊತ್ತು ಚಂದ್ರನ ಮೈಮೇಲೆ ಸುರಿದುಹೋಗುವ ನನ್ನ ಕೆಟ್ಟ ಅನುಭವ ಇವತ್ತು ನನ್ನದಾಯಿತು ಎಂದು ಕಣ್ಣಲ್ಲಿ ನೀರು ಕಚ್ಚಿಕೊಂಡು ಮಾತನಾಡುತ್ತಿತ್ತು.

ಅಲ್ಲಿ ಸುತ್ತಮುತ್ತ ಸೇರಿದ ನೆಂಟರು, ಊರ ಜನ ಅದೇನೇನೋ ಹೆಣದ ಮುಂದೆ ಮಾತಿಗಿಳಿದರು. ಅಲ್ಲಿದ್ದ ಒಬ್ಬರು ‘ಹಾರೋ ಹಕ್ಕಿಗೆ ಹಾದರ ಕಟ್ಟಿದರು’. ಇತ್ತ ಇನ್ನೊಬ್ಬಳು ‘ವ್ರತಾ ಕೆಟ್ಟರೂ ಇದಕ್ಕೆ ಸುಖ ಇಲ್ಲ’ ಎಂದಳು. ಸಂಸ್ಕಾರಕ್ಕೆ ಬಂದು ಹೋಗುತ್ತಿದ್ದ ಪಕ್ಕದೂರಿನ ಹೆಂಗಸೊಬ್ಬಳು ‘ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತಾ…’ ಅನ್ನುತ್ತಾ ಮೋರೆ ತಿರುವಿ ಅತ್ತ ಹೋದಳು. ಮಲ್ಲನ ಅತ್ತಿಗೆ ಮಾತ್ರ ತನಗೆ ತಾನೇ ಪೇಚಾಡುತ್ತಾ ‘ಬಾ ಅಕ್ಕ ಒಟ್ಟಿಗೇ ಊಟಕ್ಕೆ ಎಂದು ನೆನ್ನೆ ತಾನೇ ಕರೆದಲ್ಲಾ… ಇವತ್ತು ನನ್ನನ್ನು ಯಾರು ಕರೆಯುತ್ತಾರೆ. ನಿನ್ನ ಬಿಟ್ಟು ನಾನೆಂಗವ್ವಾ ಕಂಚಿಗೆ ಕೈ ಊರ್ಲಿ?’ ಎಂದಳು. ಊರ ಜನ ಒಬ್ಬೊಬ್ಬರೊಂದೊಂದು ಮಾತು ಹೇಳಿದ್ದು ಕೇಳಿದ್ದ ಬಗ್ಗೆ ಮಾತನಾಡಿಕೊಂಡು ಹೆಣ ನೋಡಿ ಹೋಗುತ್ತಿದ್ದರು. ಅತ್ತಿಂದ ಇತ್ತಿಂದ ಹೂವಿನ ಹಾರ, ಕಡ್ಡಿ, ಕರ್ಪೂರ ತಂದು ಹೆಣಕ್ಕೆ ಸಿಂಗಾರ ಮಾಡುತ್ತಿದ್ದಾಗ ಅಲ್ಲಿದ್ದ ಊರ ಹಿರಿಯ, ‘ಸಾಕು ತೆಗಿರೊ, ಟೈಮ್ ಆಯ್ತು ಎತ್ರೊ,ಊರು ಉಪಕಾರ ಬಲ್ದ, ಹೆಣ ಶೃಂಗಾರ ಬಲ್ದ’ ಅಂದರು. ‘ಇಟ್ಟ ವಿಭೂತಿ ಅಳಿದರೆ ಚಟ್ಟ ಹತ್ತಿದಂತೆ’ ಎಂದು ಮಾತನಾಡಿಕೊಳ್ಳುತ್ತಾ ಮಸಣದತ್ತ ಸಾಗಿದರು.

ಅತ್ತಿಂದ ಗುಡ್ಡೇಶಾಸ್ತ್ರಕ್ಕಾಗಿ ನೀರು ಹಾಕಲು ಗಡಿಗೆ ಹೊತ್ತು ತಂದ ಮಲ್ಲನ ಸಂಬಂಧಿಕರ ಪೈಕಿ ಪುಂಡರೀಕ ಕಾಲು ಜಾರಿ ಮುಗ್ಗರಿಸಿ ಬಿದ್ದ. ಅವನು ಬಿದ್ದ ಬಿರುಸಿಗೆ ಅಲ್ಲಿ ಗಡಿಗೆ ಚೂರು ಚೂರಾಗಿ ಸಾವನ್ನಪ್ಪಿತು. ಅಲ್ಲೇ ಕುಳಿತು ಕಣ್ಣೀರಿಡುತ್ತಿದ್ದ ಬಿಂದಿಗೆಗಳು ಅಯ್ಯೋ ಎಂದು ಮರುಕಪಟ್ಟವು. ಪ್ಲಾಸ್ಟಿಕ್ ಬಿಂದಿಗೆ ನನಗಾದರೂ ಈ ಸಾವು ಬರಬಾರದಿತ್ತೇ ಎಂದು ಕಣ್ಣಲ್ಲಿ ನೀರು ತಂದುಕೊಂಡಿತು.

ಊರು ಎದ್ರೆ ಆರಂಭ ಆಗೋದು ಅಂದ್ರೆ: ಕೋಳಿನ ಗೂಡಿನಿಂದ ಆಚೆಗ್ ಬಿಡದು, ಹಸ ಗೊಂತಿಕ್ಕಟ್ಟದು, ಕೊಟ್ಟಿಗೆ ಕಸ ಎತ್ತದು, ಎತ್ತಿದ ಕಸನ ತಿಪ್ಪೆಗೆಸೆಯೋದು, ಹಾಲ್ ಕರೆಯದು, ಸೈಕಲ್ ಹೊರಗ್ ತೆಗಿಯದು, ಆಳ್ಗಳು ಕೆಲಸಕ್ಕೆ ಅಕ್ಕಡಿ ಸೇರ್ಸೊದು, ಕುಂಬಾರ್ರು ಮಡ್ಕೆ ಗಾಡಿ ತುಂಬ್ಕೊಂಡು ಸಂತೆಗೋಗೋದು, ನೇಗಿಲೊತ್ತು ಹೊಲ್ಕೋಗದು, ಮನೆಗೆ ನೀರ್ ತುಂಬದು… ಹೀಗೆ. ಭರವಸೆಯನ್ನು ಗಟ್ಟಿಯಾಗಿ ಹಿಡಿದು ಅದರಲ್ಲೇ ಒಬ್ಬರಿಗೊಬ್ಬರು ಬದುಕುವುದು.

ತಿಪ್ಪೆಗೋಗಿ ಬಂದೋರು, ಸ್ಕೂಲ ಹೈಕಳು,